4. *Vijayapurada Amanikere.*—Estimate for the work is under preparation.

5. Devarahalli Tank
6. Kannagalada Vadaghattadakere
7. Kelsur tank
8. Makahalli tank
9. Nalur Amani tank
10. Uttur tank

} Arrangements are being made to get up estimates for the restoration of the tanks.

ಶ್ರೀ ಸಿದ್ಧಯ್ಯ ಉರುಫ್ ಕುನ್ನಯ್ಯ.—ಉತ್ತರದಲ್ಲಿ ನಾಲ್ಕು ಕೆರೆಗಳ ವಿಚಾರ ಹೇಳಿದ್ದೀರಿ. ಇನ್ನು ಉಳಿದ 6 ಕೆರೆಗಳ ವಿಚಾರದಲ್ಲಿ ಯಾವ ಆರ್ಡರೂ ಆಗಿಲ್ಲವೆಂದು ಹೇಳಬಹುದೇ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲಿದೆ.

ಶ್ರೀ ಸಿದ್ಧಯ್ಯ ಉರುಫ್ ಕುನ್ನಯ್ಯ. ಈ ಬಾಕಿ ಆರು ಕೆರೆಗಳನ್ನು ಯಾವಾಗ ಮಾಡಿಸುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟು ತಯಾರಾಗಿದೆ. ಪರಿಶೀಲನೆಮಾಡಿದನಂತರ ಸಾಧಕ ಬಾಧಕಗಳನ್ನು ಪರಿಶೀಲನೆ ಮಾಡಿ ಸಾಧ್ಯವಾಗುವುದಾದರೆ ಮಾಡಿಸುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—(a) ಪ್ರಶ್ನೆಗೆ ಉತ್ತರದಲ್ಲಿ 'ಡೆಪ್ಯುಟಿ ಕಮಿಷನರಿಗೆ ಕೌಂಟರ್ ಸಿಗ್ನೇಚರಿಗಾಗಿ ಕಳುಹಿಸಲಾಗಿದೆ' ಎಂದು ಹೇಳಿದ್ದೀರಿ. ಯಾವಾಗ ಕಳುಹಿಸಲಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾಗಿ ತಾರೀಖು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಡೆಪ್ಯುಟಿ ಕಮಿಷನರ ಹತ್ತಿರ ಇಂಥ ಕೆಲಸಗಳಿಗೆ ಕೌಂಟರ್‌ಸಿಗ್ನೇಚರ್ ಮಾಡುವ ಬಗ್ಗೆ ಸಾಕಾದಷ್ಟು ಹಣವನ್ನು ಅವರ disposalನಲ್ಲಿಟ್ಟಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅವರ disposal ನಲ್ಲಿ ಹಣವನ್ನಿಡಬೇಕಾಗಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಕೌಂಟರ್ ಸಿಗ್ನೇಚರಿಗಾಗಿ ಕಳುಹಿಸಿ ಬಹಳ ದಿವಸಗಳಾದರೂ ಇನ್ನೂ ಕೆಲಸ ಆಗದಿರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುಮಾಡುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ದೇವರಹಳ್ಳಿಯ ಕೆರೆಗೆ ಇನ್ನೂ ಅಂದಾಜಾಗಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಬಂದಿರತಕ್ಕ ವರದಿಯ ಪ್ರಕಾರ ಅಂದಾಜು ತಯಾರುಮಾಡುತ್ತಿದ್ದಾರೆಂದು ತಿಳಿದುಬಂದಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಪ್ರಶ್ನೆಯ ನೋಟೀಸ್ ಕೊಟ್ಟಮೇಲೆ ಎಸ್ಟಿಮೇಟ್ ಮಾಡಲಿಕ್ಕೆ ಪ್ರಾರಂಭಿಸಿದರೇ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಪೂರ್ವಭಾವಿಯಾಗಿಯೇ ಮಾಡುತ್ತಿದ್ದರು.

Extension of high level channel of Marehalli Tank, Malavalli Taluk.

Q.—230. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether there is any proposal to extend the high level channel of Marehalli Tank (South Branch) in Malavalli Taluk; if so, the estimated cost and the stage at which the records stand;

(*b*) the extent of land proposed to be brought under irrigation?

A.—Sri KADIDAL MANJAPPA (Minister for Revenue and Public Works).

(*a*) There is a proposal to extend the high level channel from Marehalli tank from the end of 8th mile to 10 miles 4 furlongs. The estimated cost of the project is Rs. 1,00,000. A detailed estimate for the project is under scrutiny.

(*b*) 431 acres.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಂದಾಜು ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ. ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆಯೋ ಅಥವಾ ಡಿಪಾರ್ಟ್‌ಮೆಂಟಿನಲ್ಲಿ ಪರಿಶೀಲನೆಯಲ್ಲಿದೆಯೋ?

ಶ್ರೀ ಕಡಿದಾಳ್ ಮಂಜಪ್ಪ.—ಡಿಪಾರ್ಟ್‌ಮೆಂಟಿನಲ್ಲಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದಷ್ಟು ಜಾಗ್ರತೆ ತರಿಸಿಕೊಂಡು ಈ ವರ್ಷವೇ ಸ್ಯಾಂಕ್ಷನ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷವೇ ಆಗುತ್ತದೆಂದು ನಾನು ಹೇಳಲಾರೆ. ಆದಷ್ಟು ಜಾಗ್ರತೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ ಅಂದಾಜು ತಯಾರಾದದ್ದು ಯಾವಾಗ ಎಂದು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಂದರೆ ನಮ್ಮಾರು ಎಷ್ಟು ವರ್ಷಗಳ ಹಿಂದೆ?

ಶ್ರೀ ಕಡಿದಾಳ್ ಮಂಜಪ್ಪ.—ವರ್ಷಗಳಾಗಿಲ್ಲ; ನಮಗೆ ಬಂದಿರತಕ್ಕ ವರದಿಯ ಪ್ರಕಾರ ಎಸ್ಟಿಮೇಟ್ ತಯಾರಾಗಿ ಈಗತಾನೆ ಅದರ scrutiny ಮಾಡುತ್ತಿದ್ದಾರೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಮಳವಳ್ಳಿಯ ತಾಲ್ಲೂಕು ವಿಶ್ವೇಶ್ವರಯ್ಯ ನಾಲಾ ಕೆಳಗಿನ ಜಮೀನುಗಳಿಗಿಂತ ಈ ಮಾರೇಹಳ್ಳಿ ಕೆರೆ ಛಾಲಾ ಕೆಳಗಿನ ಜಮೀನು ಬಹಳ ಉತ್ತಮವಾದದ್ದು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಮಾರೇಹಳ್ಳಿ ನಾಲಾ ಬಡಾವಣೆಯಾಗದೆ ಕೋಡಿಯಲ್ಲಿ ನೀರು ಹೋಲಾಗುತ್ತಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.